# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

## ಸಿ.ಸಿ. 492 /2019

| | | | |
|---|---|---|---|
| ಸಾಕ್ಷಿದಾರರ ಹೆಸರು | ನೀಲಮ್ಮ | ಪ್ರಮಾಣ ವಚನ ಬೋಧಿಸಿದ ದಿನಾಂಕ | 03.07.2024 |
| ಗಂಡನ ಹೆಸರು | ಗುರುಪಾದಪ್ಪ | | |
| ವಯಸ್ಸು | 70 ವರ್ಷ | | |
| ವೃತ್ತಿ | ಗೃಹಿಣಿ | ಚಾಸಾ | 1 |
| ವಾಸಸ್ಥಳ | ಸಂಪಿಗೆಪುರ | ಫ್ರಾಸಾ | 1 |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

ಮಹೇಶ್ವರಿ ನನ್ನ ಸೊಸೆ. ಅಷ್ಟವರ್ಣಪ್ಪ ನನ್ನ ಮಾವ. ಆರೋಪಿಗಳು ಗೊತ್ತು. ನಮ್ಮ ಪಕ್ಕದ ಬೀದಿಯವರು. ನಾನು ಚಾಸಾ 3 ರವರ ಸೈಟಿನಲ್ಲಿ ಹಸು ಕಟ್ಟಿದ್ದೆ. ಎಷ್ಟು ವರ್ಷಗಳಾಯಿತು ಎಂದು ನೆನಪಿಲ್ಲ. ಆದರೆ ಸು. 4-5 ಗಂಟೆ ಸಮಯದಲ್ಲಿ ನಾನು ಹಸು ಕಟ್ಟಿದ್ದನ್ನು ನೋಡಿ ಯಾಕೇ ಬೋಳಿಮಗಳೆ, ಸೂಳೇಮಗಳೆ ಎಂದು 1 ಮತ್ತು 2ನೇ ಆರೋಪಿಗಳು ಬೈದಿರುತ್ತಾರೆ. ಸಣ್ಣ ತಂತಿಯಿಂದ ನನಗೆ ಹಲ್ಲೆ ಮಾಡಿರುತ್ತಾರೆ. ನನಗೆ ಪೆಟ್ಟಾಗಿರುತ್ತದೆ. ಇದರಿಂದ ನನ್ನ ಎಡಭಾಗದ ಮುಖಕ್ಕೆ ಪೆಟ್ಟಾಗಿರುತ್ತದೆ. ನನ್ನ ಹಲ್ಲು ಮುರಿದುಹೋಗಿರುತ್ತದೆ. ನಂತರ ನನ್ನನ್ನು ಚಾಸಾ 3 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಪೊಲೀಸರು ಮಾರನೇ ದಿನ ಬೆಳಗ್ಗೆ 10 ಗಂಟೆಯ ನಂತರ ಆಸ್ಪತ್ರೆಗೆ ಬಂದಿರುತ್ತಾರೆ. ನಾನು ಹೇಳಲು ಆಗಲಿಲ್ಲ, ನನ್ನ ಮಾವ ಮತ್ತು ಸೊಸೆ ಹೇಳಿರುತ್ತಾರೆ.

ಸಾಕ್ಷಿಗೆ ಹೇಳಿಕೆಯಲ್ಲಿರುವ ಹೆಬ್ಬೆಟ್ಟಿನ ಗುರುತನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ 1 ಎಂದು ಗುರ್ತಿಸಲಾಯಿತು. ಆರೋಪಿಗಳನ್ನು ನೋಡಿದರೆ ಗುರ್ತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಫೆನ್ಸಿಂಗ್ ತಂತಿಯನ್ನು ನೋಡಿ ಇದಲ್ಲಾ ಅದು ನಯಾಸ್ ಆಗಿರುವ ತಂಗಿಯಾಗಿರುತ್ತದೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಗಿದೆ)

**ಪಾಟೀ ಸವಾಲು :- ಮಾನ್ಯ ಎಪಿಪಿಯವರಿಂದ :-**

ನಮಗೂ ಆರೋಪಿಗಳಿಗೂ ಜಾಗದ ವಿಚಾರದಲ್ಲಿ ಮೊದಲಿನಿಂದಲೂ ತಕರಾರು ಇತ್ತು ಎಂದರೆ ಸರಿ. ದಿಃ 22.10.2019 ರಂದು ಸಂಜೆ 4.30 ರಲ್ಲಿ ಗಲಾಟೆಯಾಗಿರುತ್ತದೆ ಎಂದರೆ ಸರಿ. ಚಾಸಾ 3 ರವರು ನಮ್ಮ ಗ್ರಾಮದ ಸ್ವತ್ತಿನ ಸಂಖ್ಯೆ 99/5 ಕ್ಕೆ ಕಲ್ಲುಕಂಬ ಹಾಕಿಸಿದ್ದರು ಎಂದರೆ ಸರಿ. 1ನೇ ಆರೋಪಿಯು ಆ ಸಮಯದಲ್ಲಿ ಸೈಟಿಗೆ ಹಾಕಿದ್ದ ಕಲ್ಲನ್ನು ಒಡೆದುಹಾಕುತ್ತಿದ್ದ, ಆಗ ನಾನು ಏಕೆ ಒಡೆದುಹಾಕುತ್ತಿದ್ದೀಯಾ ಎಂದು ಕೇಳಿರುತ್ತೇನೆ ಎಂದರೆ ಸರಿ. ಆ ವೇಳೆಯಲ್ಲಿ ಅಲ್ಲೇ ಇದ್ದಂತಹ ನ್ಯಾಯಾಲಯದ ಮುಂದಿರುವ ತಂತಿಯಿಂದ ನನ್ನ ಮೈಕೈಗೆ ಹೊಡೆದ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಂತರ ನನ್ನನ್ನು 2ನೇ ಆರೋಪಿಯು ಹಿಡಿದು ಎಳೆದಾಡಿ ಬಾಯಿಗೆ ಬಂದಂತೆ ಬೈದಿರುತ್ತಾರೆ ಎಂದರೆ ಸರಿ. ಇದರಿಂದ ನನಗೆ ಸಾರ್ವಜನಿಕವಾಗಿ ಅವಮಾನವಾಯಿತು ಎಂದರೆ ಸರಿ. 1 ಮತ್ತು 2ನೇ ಆರೋಪಿಗಳು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ ನಂತರ ಹೊರಟುಹೋದರು ಎಂದರೆ ಸರಿ. ನಂತರ ಚಾಸಾ 2, 3 ರವರು ನನ್ನನ್ನು ಸುಧಾರಿಸಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿ. ನಂತರ ನಾನು ಆಸ್ಪತ್ರೆಗೆ ಹೋದಾಗ ಮಾರನೇ ದಿನ ಪೊಲೀಸರು ನನ್ನ ಹೇಳಿಕೆ ಪಡೆದರು ಎಂದರೆ ಸರಿ. ಹೇಳಿಕೆ ಕೊಟ್ಟಾಗ ಮ. 1.00 ಗಂಟೆಯಾಗಿತ್ತು ಎಂದರೆ ಸರಿ. ನ್ಯಾಯಾಲಯದ ಮುಂದಿರುವ ತಂತಿಯಿಂದಲೇ ನನಗೆ ಹೊಡೆದಿದ್ದು ಎಂದರೆ ಸರಿ.

**ಪಾಟೀ ಸವಾಲು :- ಆರೋಪಿಗಳ ಪರ ವಕೀಲರಾದ ಶ್ರೀ ಎಸ್.ಎನ್.ಎನ್ ರವರಿಂದ**

ಆರೋಪಿಗಳಿಗೂ ನಮಗೂ ಯಾವುದೇ ಸಂಬಂಧವಿಲ್ಲ. ಚಾಸಾ 3 ರವರಿಗೂ ಸಂಬಂಧವಿಲ್ಲ. ಗಲಾಟೆಯಾದ ದಿನಾಂಕ ಮತ್ತು ಸಮಯ ಗೊತ್ತಾಗಲಿಲ್ಲ. ಘಟನಾ ಸ್ಥಳದ ಚೆಕ್ಕುಬಂದಿ ಗೊತ್ತಿಲ್ಲ. ಘಟನಾ ಸ್ಥಳ ನಿವೇಶನವಾಗಿರುತ್ತದೆ. ಆ ನಿವೇಶನ ಚಾಸಾ 3 ರವರಿಗೆ ಸೇರಿರುತ್ತದೆ.

ಈ ಹಂತದಲ್ಲಿ ಚಾಸಾ 2 ಮಹೇಶ್ವರಿ ರವರು ಬಾಗಿಲಲ್ಲಿ ನಿಂತು ಎಲ್ಲಾ ಪಾಟೀ ಸವಾಲುಗಳನ್ನು ಕೇಳಿಸಿಕೊಳ್ಳುತ್ತಿದ್ದಾರೆ.

ಗಲಾಟೆಯಾಗಿದೆ ಎನ್ನಲಾದ ನಿವೇಶನವನ್ನು 1ನೇ ಆರೋಪಿಯು ಶುದ್ಧ ಕ್ರಯಪತ್ರದ ಮೂಲಕ ಕೊಂಡುಕೊಂಡ ಜಾಗ ಎಂದರೆ ನನಗೆ ಗೊತ್ತಿಲ್ಲ. ಈಗಲೂ ಸಹಾ 1ನೇ ಆರೋಪಿಯ ಹೆಸರಿನಲ್ಲೇ ಸ್ವತ್ತು ಇದೆ ಎಂದರೆ ಗೊತ್ತಿಲ್ಲ. ಗಲಾಟಾ ಸ್ಥಳದಲ್ಲಿ ಮತ್ತು ಸಮಯದಲ್ಲಿ ನಾನು ಒಬ್ಬಳೇ ಇದ್ದೆ. ಆನಂತರ ನನ್ನ ಸೊಸೆ ಓಡಿಬಂದಿರುತ್ತಾರೆ. ಚಾಸಾ 2 ರವರು ಕಾಲುಗಂಟೆ ಆದ ನಂತರ ಏನು ಗಲಾಟೆ ಎಂದು ನೋಡಲು ಬಂದಿರುತ್ತಾರೆ. ಕಲ್ಲುಕಂಬಗಳನ್ನು ಒಡೆದುಹಾಕಿದ ಸ್ಥಳ 1ನೇ ಆರೋಪಿಗೆ ಸೇರಿದ್ದು ಎಂದರೆ ಅದೇನೋ ನನಗೆ ಗೊತ್ತಿಲ್ಲ. ನಿವೇಶನ 1ನೇ ಆರೋಪಿಗೆ ಸೇರಿದ್ದ ಕಾರಣ ಮಹೇಶ ಆ ಸ್ಥಳದಲ್ಲಿ ಇದ್ದ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ತಂತಿಯನ್ನು ತೋರಿಸಿ ಇದರಿಂದಲಾ ಹಲ್ಲೆ ಮಾಡಿದ್ದು ಎಂದರೆ ಸಾಕ್ಷಿಯು ನಾನು ಮಾತನಾಡುತ್ತಾ ಮಾತನಾಡುತ್ತಾ ಮುಂದೆ ಹೋಗುತ್ತಿದ್ದಾಗ ಹಿಂದೆಯಿಂದ ಹೊಡೆದ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ತಂತಿಯನ್ನು ನನ್ನ ಮಾವ ಕೊಟ್ಟಿರುತ್ತಾರೆ.

1ನೇ ಆರೋಪಿಯು ಬೈದುಕೊಂಡು ಬೈದುಕೊಂಡು ಹೋದ ನಂತರ 2ನೇ ಆರೋಪಿಯು ಬಂದು ನನ್ನ ಕಪಾಳಕ್ಕೆ ಹೊಡೆದಿರುತ್ತಾರೆ, ಆಗ 5 ಗಂಟೆಯಾಗಿತ್ತು. 5 ಗಂಟೆಯ ನಂತರ ಕಪಾಳಕ್ಕೆ ಹೊಡೆದ ಬಗ್ಗೆ ಆಸ್ಪತ್ರೆಯಲ್ಲಿ ಹೇಳಿರುತ್ತೇನೆ. ಗಲಾಟೆ ನಡೆದಾಗ 2-3 ಜನ ಬಂದಿದ್ದರು. ನನಗೆ ಹೊಡೆದ ನಂತರ ಜ್ಞಾನ ತಪ್ಪಿಹೋಗಿತ್ತು, ಅವರು ಯಾರು ಎಂದು ಗೊತ್ತಾಗಲಿಲ್ಲ. ಆಸ್ಪತ್ರೆಗೆ ಮಾರನೇ ದಿನ ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ಒಂದು ವಾರ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನ್ನನ್ನು ಆಸ್ಪತ್ರೆಗೆ ಚಾಸಾ 3 ರವರು ಕರೆದುಕೊಂಡು ಹೋಗಿರುತ್ತಾರೆ. ಪೊಲೀಸರು ಆಸ್ಪತ್ರೆಗೆ ಬಂದಿದ್ದರು, ಆಗ ನಮ್ಮ ಮಾವನಿಗೆ

ಹೇಳಿದ್ದೆ, ನಮ್ಮ ಮಾವರವರು ಪೊಲೀಸರಿಗೆ ಹೇಳಿರುತ್ತಾರೆ. ಪೊಲೀಸರು ಬರವಣಿಗೆ ಮಾಡಿದ್ದನ್ನು ನಾನು ಓದಿ ತಿಳಿದುಕೊಂಡಿಲ್ಲ, ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ.

ನನಗೆ ಆರೋಪಿಗಳು ತಂತಿಯಿಂದ ಹೊಡೆದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಅಕ್ರಮವಾಗಿ ತಡೆ ಮಾಡಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನಗೆ 2ನೇ ಆರೋಪಿ ನನಗೆ ಹಲ್ಲೆ ಮಾಡಿಲ್ಲ ಎಂದರೆ ಸುಳ್ಳು. ನಿವೇಶನ ಸಂಖ್ಯೆ99/5 1ನೇ ಆರೋಪಿಗೆ ಸೇರಿದ್ದ ಕಾರಣ ಅದಕ್ಕೆ ಅತಿಕ್ರಮ ಪ್ರವೇಶ ಮಾಡುವ ಪ್ರಮೇಯವೇ ಇಲ್ಲ ಎಂದರೆ ಸುಳ್ಳು. ಚಾಸಾ 3 ರವರು 1ನೇ ಆರೋಪಿಯಿಂದ ನಿವೇಶನ ಸಂಖ್ಯೆ 99/5 ನ್ನು ಕೊಂಡುಕೊಳ್ಳಲು ಪ್ರಯತ್ನ ಪಡುತ್ತಿದ್ದರು ಕೊಡದ ಕಾರಣ ನನ್ನ ಮೂಲಕ ಈ ಸುಳ್ಳು ಪ್ರಕರಣವನ್ನು ಚಾಸಾ 3 ರವರು ದಾಖಲು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ